# ಡಾ.ಗಿರಡ್ಡಿ ಗೋವಿಂದರಾಜ

ಶಾಂತರಸ ಹೆಂಬೇರಾಳು ಅವರ ನಂತರ ೧೯೯೮ರ ಜೂನ್ ತಿಂಗಳಿನಲ್ಲಿ ಡಾ॥ ಗಿರಡ್ಡಿ ಗೋವಿಂದರಾಜ ಅವರು ಸಾಹಿತ್ಯ ಅಕಾಡೆಮಿ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡರು. ಆಧುನಿಕ ಕನ್ನಡ ಸಾಹಿತ್ಯದಲ್ಲಿ ವಿಮರ್ಶಕರಾಗಿ, ಕಥೆಗಾರರಾಗಿ ಜನಪ್ರಿಯರಾದ ಇವರು – ಹಲವು ದಶಕಗಳಿಂದ ಸಾಹಿತ್ಯ ಸಾಧನೆಯಲ್ಲಿ ನಿರತರಾಗಿದ್ದಾರೆ.

ನಮ್ಮ ನಾಡಿನಲ್ಲಿ ಇಂಗ್ಲೀಷ್ ಪ್ರಾಧ್ಯಾಪಕರಾಗಿದ್ದುಕೊಂಡು ಕನ್ನಡ ಸಾಹಿತ್ಯಕ್ಕೆ ಅಪಾರ ಕೊಡುಗೆ ನೀಡಿರುವವರ ಅನೇಕ ಉದಾಹರಣೆಗಳುಂಟು. ಆ ಗುಂಪಿಗೆ ಸೇರಿದವರು ಗಿರಡ್ಡಿ. ಕನ್ನಡ ಸಾಹಿತ್ಯ ಶ್ರೀಮಂತಗೊಳ್ಳುವ ನಿಟ್ಟಿನಲ್ಲಿ ಇದೊಂದು ಗಮನಾರ್ಹ ಬೆಳವಣಿಗೆಯೂ ಹೌದು.

ಗಿರಡ್ಡಿಯವರು ಕನ್ನಡದ ಪ್ರಮುಖ ಕಥೆಗಾರರಲ್ಲಿ ಒಬ್ಬರು.

ಗಿರಡ್ಡಿ ಅಕಾಡೆಮಿಯ ಅಧ್ಯಕ್ಷರಾದದ್ದು ನೂತನ ಸಹಸ್ರಮಾನದ ಆರಂಭಿಕ ಅವಧಿಯಲ್ಲಿ. ಆಗ ತಮ್ಮ ತಂಡ ತೆಗೆದುಕೊಳ್ಳುವ ನಿರ್ಧಾರಗಳಿಗೆ ವಿಶೇಷ ಮಹತ್ವವಿರುತ್ತದೆ ಎಂಬುದನ್ನು ಅವರು ಅರಿತಿದ್ದರು. ಹೀಗಾಗಿ ಗಿರಡ್ಡಿ '೨೦ನೇ ಶತಮಾನದ ಆಧುನಿಕ ಕನ್ನಡ ಸಾಹಿತ್ಯದ ಇತಿಹಾಸ ಮತ್ತು ಶತಮಾನದ ಸಂಕಲನಗಳು' ಎಂಬ ಎರಡು ಯೋಜನೆಗಳನ್ನು ಕೈಗೆತ್ತಿಕೊಂಡರು.

೨೦ನೇ ಶತಮಾನದ ಕೊನೆಯೊಂದಿಗೆ ಆಧುನಿಕ ಕನ್ನಡ ಸಾಹಿತ್ಯವು ಒಂದು ಶತಮಾನ ಪೂರೈಸಿತ್ತು. ಅದರ ಮೌಲ್ಯಮಾಪನಕ್ಕೆ ಅದು ಸರಿಯಾದ ಸಮಯವಾಗಿತ್ತು. ಈ ದೃಷ್ಟಿಯಿಂದ ಸಾಹಿತ್ಯ ಅಕಾಡೆಮಿಯು ಆಗ ಸುಮಾರು ೨೫೦೦ ಪುಟಗಳ ೮ ಸಂಪುಟಗಳಲ್ಲಿ ಅದರ ಇತಿಹಾಸವನ್ನು ಬರೆಸುವ ಯೋಜನೆಯನ್ನು ರೂಪಿಸಿತು. ಹಿರಿಯ ವಿಮರ್ಶಕ ಪ್ರೊ॥ ಎಲ್.ಎಸ್.ಶೇಷಗಿರಿರಾಯರು ಈ ಯೋಜನೆಯ ಸಂಪಾದಕರಾಗಿಯೂ, ಪ್ರೊ॥ ಓ.ಎಲ್.ನಾಗಭೂಷಣ ಸ್ವಾಮಿ ಮತ್ತು ಪ್ರೊ॥ ಜಿ.ಶ್ರೀನಿವಾಸರಾಜು ಸಹಸಂಪಾದಕರಾಗಿಯೂ ನಿಯುಕ್ತರಾದರು. ಮೊದಲು ಆರು ಸಂಪುಟಗಳಲ್ಲಿ ಆಧುನಿಕ ಕನ್ನಡ ಸಾಹಿತ್ಯದ ಆಶಯ, ಆಕೃತಿ, ಪರಿಕಲ್ಪನೆಗಳು, ಆಧುನಿಕ ಕನ್ನಡದ ಕಾವ್ಯ, ಕಾದಂಬರಿ, ನಾಟಕ ಮತ್ತು ವಿಮರ್ಶೆಗಳಿದ್ದವು. ೭ನೇ ಸಂಪುಟವು ಜೀವನ ಚರಿತ್ರೆ, ಆತ್ಮಕಥೆ, ಪ್ರಬಂಧ, ಪ್ರವಾಸ ಸಾಹಿತ್ಯ, ಮಕ್ಕಳ ಸಾಹಿತ್ಯ ಮತ್ತು ವಿಜ್ಞಾನ – ಇಷ್ಟನ್ನು ಒಳಗೊಂಡಿತ್ತು. ೮ನೇ ಸಂಪುಟದಲ್ಲಿ ಜಾನಪದ, ಸಂಶೋಧನೆ, ಸಂಭಾವನಾ ಗ್ರಂಥಗಳು, ಸಾಹಿತ್ಯ ಸಂಕಲನ, ಕಿರುಪತ್ರಿಕೆ, ಸಂಸ್ಥೆಗಳು ಇವುಗಳನ್ನು ಸೇರಿಸಲಾಗಿತ್ತು. ಜೊತೆಗೆ, ಕನ್ನಡ ಸಾಹಿತ್ಯವು ವಿವಿಧ ಪ್ರಕಾರಗಳಲ್ಲಿ ತೋರಿದ ಅತ್ಯುತ್ತಮ ಸಾಧನೆಗಳ ಐದು ಪ್ರಾತಿನಿಧಿಕ ಸಂಕಲನಗಳನ್ನು ಪ್ರತಿನಿಧಿಸುವ ಯೋಜನೆಯನ್ನು ಅಕಾಡೆಮಿ ಹಮ್ಮಿಕೊಂಡಿತು. ಡಾ. ಜಿ.ಎಸ್. ಶಿವರುದ್ರಪ್ಪ ಅವರು ಅಕಾಡೆಮಿ ಅಧ್ಯಕ್ಷರಾಗಿದ್ದಾಗ ಗಿರಡ್ಡಿಯವರ ಸಂಪಾದಕತ್ವದಲ್ಲಿ 'ಸಾಹಿತ್ಯ ಪಾರಿಭಾಷಿಕ ಮಾಲೆ' ಪ್ರಾರಂಭಗೊಂಡಿತ್ತು. ಅನಂತರ ಸ್ವಲ್ಪಕಾಲ ಅದು ಮುಂದುವರೆದಿರಲಿಲ್ಲ. ಗಿರಡ್ಡಿಯವರು ಅಧ್ಯಕ್ಷರಾದೊಡನೆ ಈ ಮಾಲೆಯನ್ನು ಪುನರಾರಂಭಿಸಿದರು. ಡಾ. ಸಿ.ಎನ್. ರಾಮಚಂದ್ರನ್‌ರ 'ವಸಾಹತ್ತೋತ್ತರ ಚಿಂತನೆ' ಮತ್ತು 'ಸಾಹಿತ್ಯ ವಿಮರ್ಶೆ', ಕೆ.ವಿ. ಅಕ್ಷರ ಅವರ 'ಎಪಿಕ್ ರಂಗಭೂಮಿ', ಡಾ॥ ಬಸವರಾಜ ನಾಯಕ ಅವರ 'ಸಂರಚನಾವಾದ', ಡಾ.ಬಿ.ಎನ್.ಸುಮಿತ್ರಾ ಬಾಯಿಯವರ 'ಸ್ತ್ರೀವಾದ', ಟಿ.ಪಿ. ಅಶೋಕ ಅವರ 'ವಾಸ್ತವತಾವಾದ', ಡಾ.ಎಚ್.ಎಸ್.ವೆಂಕಟೇಶ ಮೂರ್ತಿಯವರ 'ಕಥನ ಕವನ', ಡಾ॥ ಪುರುಷೋತ್ತಮ ಬಿಳಿಮಲೆಯವರ 'ಬಂಡಾಯ ದಲಿತ ಸಾಹಿತ್ಯ', ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ ಅವರ 'ನವ್ಯತೆ',

ಡಾ.ಜಿ.ಎಸ್.ಆಮೂರರ 'ಕಾಮಿಡಿ' ಇವೆಲ್ಲ ಈ ಮಾಲೆಯಲ್ಲಿ ಮೂಡಿ ಬಂದ ಕೃತಿಗಳು. ಹಾಗೆಯೇ ಈ ಮಾಲಿಕೆಯಲ್ಲಿ ಪ್ರಕಟಗೊಂಡು ಮುಗಿದುಹೋಗಿದ್ದ ಹಾಗೂ ಬೇಡಿಕೆ ಇದ್ದ ಕೆಲವು ಕೃತಿಗಳ ಮರುಮುದ್ರಣವನ್ನು ಮಾಡಲಾಯಿತು.

'ಸಾಲು ದೀಪ'ಗಳು ಅಕಾಡೆಮಿ ಕೈಗೊಂಡಿದ್ದ ಮತ್ತೊಂದು ಮಹತ್ವದ ಯೋಜನೆ. ಈ ಗ್ರಂಥಗಳು ಮುಗಿದು ಹೋಗಿ ಬೇಡಿಕೆ ಬಹಳವಾದ್ದರಿಂದ ಗಿರಡ್ಡಿಯವರು ಅದನ್ನು ಪರಿಷ್ಕರಿಸುವ ಯೋಜನೆಯನ್ನು ಪ್ರಾರಂಭಿಸಿದರು. ಜಿ.ಎಸ್. ಸಿದ್ಧಲಿಂಗಯ್ಯ ಮತ್ತು ಎಂ.ಎಚ್. ಕೃಷ್ಣಯ್ಯ ಅವರ ಸಂಪಾದಕತ್ವದಲ್ಲಿ ಈ ಕಾರ್ಯವನ್ನು ಪ್ರಾರಂಭಿಸಿ, ಈ ಕೃತಿಯಲ್ಲಿ ೪೦ ಹೊಸ ಲೇಖನಗಳನ್ನು ಸೇರಿಸಲಾಯಿತು. ಅಕಾಡೆಮಿ ಪ್ರಕಟಿಸುತ್ತಿದ್ದ ಕನ್ನಡದ ಮತ್ತು ಇಂಗ್ಲಿಷ್ 'ಅನಿಕೇತನ' ನಿಯತಕಾಲಿಕೆಗಳು ಕಾರಣಾಂತರಗಳಿಂದ ನಿಂತುಹೋಗಿದ್ದವು. ಅವನ್ನು ಮತ್ತೆ ಆರಂಭಿಸಿ ನಿಯಮಿತವಾಗಿ ಹೊರತರುವ ಕೆಲಸಕ್ಕೆ ಗಿರಡ್ಡಿ ಚಾಲನೆ ನೀಡಿದರು. 'ಅನಿಕೇತನ' ಇಂಗ್ಲಿಷ್ ಆವೃತ್ತಿಯನ್ನು ಅಂತರಜಾಲಕ್ಕೆ ಸೇರಿಸುವ ಕೆಲಸವನ್ನು ಅಕಾಡೆಮಿ ಮಾಡಿತು. ಇಂತಹ ಒಂದು ಪ್ರಯತ್ನ ಆಗ ಭಾರತದ ಯಾವುದೇ ಒಂದು ಅಕಾಡೆಮಿಗೆ ಹೋಲಿಸದರೂ ಹೊಸದಾಗಿತ್ತು. ಈ ರೀತಿ ಇದನ್ನು ಕಾರ್ಯರೂಪಕ್ಕೆ ತಂದವರು ಅದರ ಸಂಪಾದಕ ಎಸ್.ಸುಗತ.

ಡಾ॥ ಗಿರಡ್ಡಿ ಗೋವಿಂದರಾಜ ಅವರ ಅಧ್ಯಕ್ಷತೆಯ ಅವಧಿಯಲ್ಲಿ ಇರುತ್ತಿದ್ದ ಪುಸ್ತಕ ಬಹುಮಾನ ಯೋಜನೆಯ ಪ್ರತಿಯೊಂದು ಬಹುಮಾನಿತ ಕೃತಿಯ ಬಗ್ಗೆ ಬಂದ ವಿಮರ್ಶಾತ್ಮಕ ಅಭಿಪ್ರಾಯಗಳನ್ನು ಪುಸ್ತಕರೂಪದಲ್ಲಿ ಪ್ರಕಟಿಸಲಾಯಿತು. ಹೀಗಾಗಿ ಓದುಗರಿಗೆ ಕೃತಿಯೊಂದಿಗೆ ವಿಮರ್ಶೆಗಳನ್ನು ಓದುವ ಅವಕಾಶ ದೊರೆಯಿತು. ಈ ಅವಧಿಯಲ್ಲಿ 'ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರು' ಮಾಲಿಕೆಯಲ್ಲಿ ಒರಿಯಾ ಭಾಷೆಯ ಸುಪ್ರಸಿದ್ಧ ಕವಿ ಸೀತಾಕಾಂತ್ ಮಹಾಪಾತ್ರ ಅವರ ಪರಿಚಯಾತ್ಮಕ ಕೃತಿ ಹೊರಬಂದಿತು.

ಡಾ॥ ಗಿರಡ್ಡಿಯವರು ತಮ್ಮ ಅವಧಿಯಲ್ಲಿ ಹಲವಾರು ವಿಚಾರ ಸಂಕಿರಣಗಳನ್ನು ಮತ್ತು ವಿಭಾಗ ಮಟ್ಟದ ಯುವ ಕವಿಗೋಷ್ಠಿಗಳನ್ನು ನಾಡಿನ ಎಲ್ಲ ಭಾಗಗಳ ಲೇಖಕರಿಗೆ ಸಮನ ಪ್ರಾತಿನಿಧ್ಯ ನೀಡಿ ಏರ್ಪಡಿಸಿದರು. ಭವಿಷ್ಯದ ಕವಿಗಳನ್ನು ಗುರುತಿಸಿ, ಪ್ರೋತ್ಸಾಹಿಸಿ ಕನ್ನಡ ಕಾವ್ಯ ಪರಂಪರೆಯನ್ನು ಉಳಿಸಿ, ಬೆಳೆಸುವ ಸಲುವಾಗಿ ಹೊಸಪೇಟೆ, ಗುಲ್ಬರ್ಗಾ, ತುಮಕೂರು, ಮೈಸೂರು ಮುಂತಾದೆಡೆ ಯುವ ಕವಿಗೋಷ್ಠಿ, ಕಮ್ಮಟಗಳನ್ನೂ ಏರ್ಪಡಿಸಿದರು. ಇದರಿಂದಾಗಿ ಗ್ರಾಮೀಣ ಯುವ ಪ್ರತಿಭೆಗಳು ಬೆಳಕಿಗೆ ಬರಲು ಬಹಳ ಅನುಕೂಲವಾಯಿತು. ಹಾಗಯೇ ಇವರ ಅವಧಿಯಲ್ಲಿ ಡಾ॥ ಬೆಸಗರಹಳ್ಳಿ ರಾಮಣ್ಣನವರ ಸಾಹಿತ್ಯ ಮತ್ತು ಗ್ರಾಮೀಣ ಸಂಸ್ಕೃತಿ, ಕನ್ನಡ ನವೋದಯ ಮತ್ತು ಸಾಲಿ ರಾಮಚಂದ್ರರಾಯರ ಕಾವ್ಯ, ಕನ್ನಡ ಕಾವ್ಯದ ನವೋದಯ – ಮೈಸೂರು ಕೇಂದ್ರ, ಓದುವ ದಾರಿಗಳು, ಶಾಂತಿನಾಥ ದೇಸಾಯಿಯವರ ಸಾಹಿತ್ಯ, ಮಿರ್ಜಿ ಅಣ್ಣಾರಾಯರ ಸಾಹಿತ್ಯ, ಗಿರೀಶ್ ಕಾರ್ನಾಡರ ನಾಟಕಗಳು, ಕನ್ನಡ ನವೋದಯ ಕಾವ್ಯ – ಮಂಗಳೂರು ಕೇಂದ್ರ, ವೃತ್ತಿ ರಂಗಭೂಮಿಯ ನಾಟಕ ಸಾಹಿತ್ಯ, ಶತಮಾನದ ಕನ್ನಡ ಸಾಹಿತ್ಯ – ಪುನರಾವಲೋಕನ ಅರವಿಂದ ನಾಡಕರ್ಣಿಯವರ ಕಾವ್ಯ, ಕಾದಂಬರಿ ಸಾಹಿತ್ಯ, ಶೂನ್ಯ ಸಂಪಾದನೆ – ಮರು ಚಿಂತನೆ, ಸಣ್ಣ ಕತೆಗಳ ಕಮ್ಮಟ, ಕುಂ.ವೀ. ಅವರ ಸಾಹಿತ್ಯ, ಬೆಳಗಾವಿ ಜಿಲ್ಲೆಯ ಹಿರಿಯ ಸಾಹಿತಿಗಳ ಬದುಕು–ಬರಹ, ಸತ್ಯಕಾಮ, ಎಸ್.ವಿ. ಪರಮೇಶ್ವರ ಭಟ್ಟ ಅವರ ಸಾಹಿತ್ಯ, ರಂಗಭೂಮಿ ಮತ್ತು ಸಾಹಿತ್ಯ, ಅಂಧರ ಕವಿಗೋಷ್ಠಿ – ಹೀಗೆ ಸಾಹಿತ್ಯ ಅಕಾಡೆಮಿಯು ಸ್ವತಂತ್ರವಾಗಿ ಮತ್ತು ನಾಡಿನ ವಿವಿಧ ಕೇಂದ್ರಕಗಳಲ್ಲಿನ ಸಂಘ – ಸಂಸ್ಥೆಗಳ ನೆರವು ಹಾಗೂ ಸಹಯೋಗದೊಂದಿಗೆ ಹಲವಾರು ವಿಚಾರ ಸಂಕಿರಣ, ಕಮ್ಮಟ, ಕವಿಗೋಷ್ಠಿ ಸಂವಾದ ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿತು.

ಜೆ.ಸಿ.ರಸ್ತೆಯ ರವೀಂದ್ರ ಕಲಾಕ್ಷೇತ್ರದ ಆವರಣದಲ್ಲಿ ನಿರ್ಮಾನಗೊಂಡ ಸುಂದರ ಕಟ್ಟಡ 'ಕನ್ನಡ ಭವನ' ೧೯೯೮ರ ನ. ೨೯ರಂದು ಉದ್ಘಾಟನೆಗೊಂಡಿತು. ನಗರದ ವಿವಿಧ ಕೇಂದ್ರಗಳಲ್ಲಿ ಕಡಿಮೆ ಜಾಗದಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಹಲವಾರು ಅಕಾಡೆಮಿಗಳನ್ನು ಒಂದೇ ಸೂರಿನಡಿ ತರುವ ಯೋಜನೆ ಇದಾಗಿತ್ತು. ನೃಪತುಂಗ ರಸ್ತೆಯ ಕಟ್ಟಡವೊಂದರಲ್ಲಿದ್ದ ಸಾಹಿತ್ಯ ಅಕಾಡೆಮಿ ಡಾ॥ ಗಿರಡ್ಡಿಯವರ ಅವಧಿಯಲ್ಲಿ ಈ ನೂತನ ಕಟ್ಟಡದ ತನ್ನ ವಿಶಾಲವಾದ ವಿಭಾಗಕ್ಕೆ ವರ್ಗಾವಣೆಗೊಂಡಿತು.

ಹೀಗೆ ಶತಮಾನದ ತಿರುವಿನಲ್ಲಿ ಅಧ್ಯಕ್ಷರಾದ ಡಾ॥ ಗಿರಡ್ಡಿಯವರು ಸದಾ ಕ್ರಿಯಾಶೀಲರಾಗಿದ್ದುದಲ್ಲದೆ, ಎಲ್ಲರ ಸಹಕಾರ ಹಾಗೂ ನೆರವಿನೊಂದಿಗೆ ಹಲವಾರು ಪ್ರಮುಖ ಹಾಗೂ ಐತಿಹಾಸಿಕ ಮಹತ್ವವುಳ್ಳ ಯೋಜನೆಗಳನ್ನು ಪೂರೈಸಿದರು.